

# DSERT SOLUTIONS

**ಪದ್ಯ – 1** **ಏಣಿ**

## ಪ್ರಶ್ನೋತ್ತರಗಳು

### ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ಏಣಿ ಜನರಿಗೆ ಮಾಡಿದ ಉಪಕಾರವೇನು?**

**ಉತ್ತರ:**

ಏಣಿ ಜನರನ್ನು ಮೇಲಕ್ಕೆ ಎತ್ತಿ ಹಿಡಿಯುವುದರ ಮೂಲಕ ಉಪಕಾರ ಮಾಡುತ್ತದೆ.

**ಪ್ರಶ್ನೆ 2:**

**ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಏನು?**

**ಉತ್ತರ:**

ಏಣಿಯನ್ನು ಬಳಸಿ ಮೇಲೇರಿದವರಿಗೆ 'ನನ್ನನ್ನು ಬಳಸದೇ ಅವರು ಹೇಗೆ ಇಳಿಯುತ್ತಾರೆ?' ಎಂಬ ಸವಾಲು ಹಾಕುತ್ತದೆ.

**ಪ್ರಶ್ನೆ 3:**

**ಕವಯಿತ್ರಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ?**

**ಉತ್ತರ:**

ಕವಯಿತ್ರಿ ಮೇಲಂತಸ್ತಿನ ಮಾನವನನ್ನು ತ್ರಿಶಂಕುಗಳು ಎಂದು ಕರೆದಿದ್ದಾರೆ.

**ಪ್ರಶ್ನೆ 4:**

**ಮೇಲೇರಿದವರು ತ್ರಿಶಂಕುಗಳು ಆಗುವುದು ಯಾವಾಗ?**

**ಉತ್ತರ:**

ಮೇಲೇರಿದವರು, ಮೇಲೇರಲು ಸಹಾಯ ಮಾಡಿದವರನ್ನೇ ಮರೆತಾಗ ತ್ರಿಶಂಕುಗಳಾಗುವರು.

**ಪ್ರಶ್ನೆ 5:**

**ಏಣಿಗೆ ಬೀಳುವ ಭಯವಿಲ್ಲ ಏಕೆ?**

**ಉತ್ತರ:**

ಏಣಿಯು ಆನೆ ಭಾರ ಹೊತ್ತ ಗಟ್ಟಿ ನೆಲದ ಮೇಲೆ ಕಾಲೂರಿರುವುದರಿಂದ ಬೀಳುವ ಭಯವಿಲ್ಲ.

## ಆ. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು?**

**ಉತ್ತರ:**

ಏಣಿಯ ಸಹಾಯದಿಂದ ಮೇಲೇರಿದವರಿಗೆ ಮೇಲಂತಸ್ತು ಯಾವಾಗಲೂ ಶಾಶ್ವತವಲ್ಲ, ಅದು ಸುರಕ್ಷಿತವೂ ಅಲ್ಲ. ಆಕಾಶದಲ್ಲಿ ಎಷ್ಟೇ ಹೊತ್ತು ಹಾರಾಡಿದರೂ ಮತ್ತೆ ಅವರು ಕೆಳಗೆ ಇಳಿಯಲೇ ಬೇಕು. ಹಾಗೆಯೇ ಸಹಾಯ ಮಾಡಿದವರನ್ನು ಮರೆಯಬಾರದೆಂದು, ಅವರನ್ನು ಮರೆತರೆ ಅವರಿಗೆ ಒಳಿತಲ್ಲ ಎಂದು ಉಪದೇಶಿಸಿದೆ.

**ಪ್ರಶ್ನೆ 2:**

**ಏಣಿ ಹೇಳಿಕೊಳ್ಳುವ ಕಷ್ಟಗಳೇನು?**





**ಉತ್ತರ:**

ಏಣಿ ಎಷ್ಟೋ ಜನಸಾಮಾನ್ಯರನ್ನು ಎತ್ತಿ ಹಿಡಿದು ಅವರನ್ನು ಮೇಲಕ್ಕೇರಿಸುತ್ತದೆ. ಆದರೆ ಆ ಜನರು ಅದರ ಸಹಾಯವನ್ನು ಮರೆತು ಹೋಗುತ್ತಾರೆ. ಏಣಿಯು ಒಂದೊಂದು ಜನರ ಹೆಜ್ಜೆಯ ಭಾರ ಹೊರುವಾಗ ತಾನು ಪಟ್ಟ ಕಷ್ಟ ಹೇಳಿಕೊಳ್ಳಲು ಸಾಧ್ಯವಿಲ್ಲವೆಂದು ಹೇಳುತ್ತದೆ. ಅದು ಆನೆ ಭಾರ ಹೊತ್ತ ಗಟ್ಟಿ ನೆಲದಲ್ಲಿ ಕಾಲೂರಿ ನಿಂತಿರುವುದರಿಂದ ಕೆಳಗೆ ಬೀಳುವ ಭಯವಿಲ್ಲ ಎಂದು ಹೇಳುತ್ತದೆ.

**ಪ್ರಶ್ನೆ 3:**

**ಮೇಲೇರಿದವನಿಗೆ ಏಣಿಯ ಮಹತ್ವ ಯಾವಾಗ ಅರಿವಾಗುತ್ತದೆ?**

**ಉತ್ತರ:**

ಕಾಲೂರುವ ನೆಲವನ್ನೇ ತಿರಸ್ಕರಿಸಿ ಮೇಲೇರಿದವರು ಏಣಿಯ ಸಹಾಯವನ್ನು ಮರೆತು ಮೇಲಂತಸ್ತಿನಲ್ಲಿ ಎಷ್ಟು ಹೊತ್ತು ಹಾರಾಡಲು ಸಾಧ್ಯ? ನಂತರ ಅವರ ಸೊಕ್ಕು ಕರಗಿ ಭೂಮಿ ಶಾಶ್ವತವೆಂಬ ಅರಿವು ಮೂಡಿ ಕೆಳಗಿಳಿಯುವಾಗ ಏಣಿಯ ಮಹತ್ವ ಅರಿವಾಗುತ್ತದೆ.

**ಪ್ರಶ್ನೆ 4:**

**ಏಣಿ ತಾನು ಎಂಥವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ?**

**ಉತ್ತರ:**

ಕಾಲೂರುವ ನೆಲವನ್ನೇ ತಿರಸ್ಕರಿಸಿ ಮೇಲೇರಿದವರು ಏಣಿಯ ಸಹಾಯವನ್ನು ಮರೆತು ಮೇಲಂತಸ್ತಿನಲ್ಲಿ ಎಷ್ಟು ಹೊತ್ತು ಹಾರಾಡಲು ಸಾಧ್ಯ? ನಂತರ ಅವರ ಸೊಕ್ಕು ಕರಗಿ ಭೂಮಿ ಶಾಶ್ವತವೆಂಬ ಅರಿವು ಮೂಡಿ ಕೆಳಗಿಳಿಯುವಾಗ ಏಣಿಯ ಮಹತ್ವ ಅರಿವಾಗುತ್ತದೆ. ಆದರೆ ಅಂತವರಿಗೆ ಏಣಿ ಸಿಗುವುದಿಲ್ಲ.

ಯಾವ ಜನಸಾಮಾನ್ಯರಲ್ಲಿ ವಿನಯ, ವಿಧೇಯ ಇರುತ್ತದೆಯೋ ಅಂತಹ ಜನಸಾಮಾನ್ಯರ ನಮ್ರತೆಗೆ ಕರಗಿ ಅವರನ್ನು ಕೆಳಗೆ ಬೀಳದಂತೆ ಎತ್ತಿ ಹಿಡಿಯುತ್ತೇನೆಂದು ಏಣಿ ಹೇಳುತ್ತದೆ.

## ಇ. ಸುಮಾರು ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ಏಣಿ ಕವಿತೆ ನೀಡುವ ಸಂದೇಶವೇನು?**

**ಉತ್ತರ:**

ಏಣಿ ಈ ಪ್ರಸ್ತುತ ಪದ್ಯದ ಮೂಲಕ ಶ್ರಮಿಕರ ಮತ್ತು ಜನಸಾಮಾನ್ಯರ ಸಹಾಯದಿಂದ ಪದವಿ, ಅಧಿಕಾರ, ಕೀರ್ತಿ, ಹಣ, ಗೌರವ, ಯಶಸ್ಸು ಪಡೆದು ವ್ಯಕ್ತಿ ಮೇಲೇರುತ್ತಾನೆ. ಹೀಗೆ ಮೇಲೇರಿದವನಿಗೆ ಅಹಂ ತುಂಬಿಕೊಳ್ಳುತ್ತದೆ. ತನ್ನ ಏಳಿಗೆಗೆ ಕಾರಣರಾದವರನ್ನು ಮರೆಯುತ್ತಾನೆ ಹಾಗೂ ತಿರಸ್ಕರಿಸುತ್ತಾನೆ. ಹಣ, ಅಧಿಕಾರ, ಅಂತಸ್ತುಗಳು ಎಂದಿಗೂ ಶಾಶ್ವತವಲ್ಲ ಎಂಬುದನ್ನು ಅರಿತು, ತನ್ನ ಏಳಿಗೆಗೆ ಕಾರಣರಾದವರನ್ನು ಗೌರವಿಸದಿದ್ದರೆ ತಮ್ಮ ವಿಪತ್ತಿಗೆ ತಾವೇ ಕಾರಣರಾಗುತ್ತಾರೆ ಎಂಬುದನ್ನು ತಿಳಿಸುತ್ತದೆ. ಹಾಗೆಯೇ ಅದು ಸಹಾಯ ಮಾಡಿದವರನ್ನು ಮರೆಯದಿದ್ದರೆ ಅವರು ತಮ್ಮ ಜೀವನದಲ್ಲಿ ಎಂದಿಗೂ ಕೆಳಗೆ ಬೀಳುವ ಭಯವಿಲ್ಲದೆ ಬದುಕಬಹುದೆಂದು ಏಣಿಯ ಕವಿತೆಯಲ್ಲಿನ ಸಂದೇಶವಾಗಿದೆ.

**ಪ್ರಶ್ನೆ 2:**

**ಏಣಿ ಹೇಳಿಕೊಳ್ಳುವ ಸಂಕಟ ಹಾಗೂ ಹಾಕುವ ಸವಾಲುಗಳೇನು?**

**ಉತ್ತರ:**

ಏಣಿ ಎಷ್ಟೋ ಜನಸಾಮಾನ್ಯರನ್ನು ಎತ್ತಿ ಹಿಡಿದು ಅವರನ್ನು ಮೇಲಕ್ಕೇರಿಸುತ್ತದೆ. ಆದರೆ ಆ ಜನರು ಅದರ ಸಹಾಯವನ್ನು ಮರೆತು ಹೋಗುತ್ತಾರೆ. ಅಂತಹ ಜನರನ್ನು ಏಣಿ, ಅವರು ಹೇಗೆ ತನ್ನ ಸಹಾಯವಿಲ್ಲದೆ ಕೆಳಗೆ

ಇಳಿಯುತ್ತಾರೆಂದು ನೋಡುವೆ ಎಂದು ಸವಾಲು ಹಾಕುತ್ತದೆ. ಏಣಿಯು ಒಂದೊಂದು ಜನರ ಹೆಜ್ಜೆಯ ಭಾರ ಹೊರುವಾಗ ತಾನು ಪಟ್ಟ ಕಷ್ಟ ಹೇಳಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳುತ್ತದೆ. ಅದು ಆನೆ ಭಾರ ಹೊತ್ತ ಗಟ್ಟಿ ನೆಲದಲ್ಲಿ ಕಾಲೂರಿ ನಿಂತಿರುವುದರಿಂದ ತನಗೆ ಕೆಳಗೆ ಬೀಳುವ ಭಯವಿಲ್ಲ ಎಂದು ಹೇಳುತ್ತದೆ. ಈ ಜನಸಾಮಾನ್ಯರು ಕಾಲೂರಿದ ನೆಲವನ್ನು ಮರೆತು ಆಕಾಶದಲ್ಲಿ ಎಷ್ಟೇ ಹೊತ್ತು ಹಾರಾಡಿದರೂ ಅವರು ಏಣಿಯ ಸಹಾಯವಿಲ್ಲದೆ ಕೆಳಗೆ ಬರಲು ಸಾಧ್ಯವಿಲ್ಲ. ಅವರು ತಮ್ಮ ಸೊಕ್ಕು ಕರಗಿ ಭೂಮಿ ಶಾಶ್ವತವೆಂಬ ಅರಿವು ಮೂಡಿದಾಗ ಏಣಿ ಅವರ ಸಹಾಯಕ್ಕೆ ಬರುವುದಿಲ್ಲ ಎಂದು ಹೇಳುತ್ತದೆ.

## ಈ. ಸಂದರ್ಭದೊಡನೆ ವಿವರಿಸಿರಿ:

**1. ನಾನೂ ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು.**

**ಉತ್ತರ:** ಪ್ರಸ್ತುತ ವಾಕ್ಯವನ್ನು 'ಸುಕನ್ಯಾ ಮಾರುತಿ' ಅವರು ಬರೆದಿರುವ 'ಸಮಗ್ರ ಕವನ ಸಂಕಲನ' ಕೃತಿಯಿಂದ ಆಯ್ದು, 'ಏಣಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಪ್ರಸ್ತುತ ಸಾಲುಗಳನ್ನು ಏಣಿಯು ತನ್ನ ಸಹಾಯವನ್ನು ಮರೆತು ಮೆರೆಯುವ ಜನರನ್ನು ಕಂಡಂತಹ ಸಂದರ್ಭದಲ್ಲಿ ಹೇಳಿದೆ.

**ವಿವರಣೆ:** ಜನಸಾಮಾನ್ಯರು ಏಣಿಯ ಸಹಾಯದಿಂದ ಮೇಲಕ್ಕೆ ಹತ್ತಿ ಹೋಗಿ ಏಣಿಗೆ ಕೈ ಬೀಸುವರು. ಆದರೆ ಅವರು ಏಣಿ ಸಹಾಯದಿಂದಲೇ ಮೇಲೇರಿದ್ದು ಎಂಬುದನ್ನು ಮರೆಯುವರು. ಆದರೆ ಏಣಿಯು 'ತನ್ನ ಸಹಾಯವಿಲ್ಲದೆ ಹೇಗೆ ಕೆಳಗೆ ಇಳಿಯುತ್ತಾರೆಂದು ನೋಡುತ್ತೇನೆ' ಎಂದು ಸವಾಲು ಹಾಕುತ್ತದೆ.

**ವಿಶೇಷತೆ:** ಹತ್ತಿದ ಏಣಿ ಒದ್ದಿದ್ದವರಿಗೆ ಏಣಿ ಹಾಕುವ ಸವಾಲನ್ನು ಇಲ್ಲಿ ಗಮನಿಸಬಹುದಾಗಿದೆ.

**2. ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ**

**ಉತ್ತರ:** ಪ್ರಸ್ತುತ ವಾಕ್ಯವನ್ನು 'ಸುಕನ್ಯಾ ಮಾರುತಿ' ಅವರು ಬರೆದಿರುವ 'ಸಮಗ್ರ ಕವನ ಸಂಕಲನ' ಕೃತಿಯಿಂದ ಆಯ್ದು, 'ಏಣಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಏಣಿಯು ತಾನು ಪಟ್ಟ ಕಷ್ಟವನ್ನು ಹೇಳಿಕೊಳ್ಳುವ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ.

**ವಿವರಣೆ:** ಆನೆಯ ಭಾರದ ಜನರ ಒಂದೊಂದು ಹೆಜ್ಜೆಯ ಭಾರವನ್ನು ಹೊರುವಾಗ ಏಣಿಯು ಪಡುವ ಕಷ್ಟ ಯಾರಿಗೂ ಅರಿವಾಗುವುದಿಲ್ಲ. ಅವರು ಯಾವುದೇ ಕಷ್ಟ ಪಡದೆ ಮೇಲಕ್ಕೇರಿ, ಮೇಲಕ್ಕೇರಿಸಿದವರ ಸಹಾಯವನ್ನು ಮರೆಯುವರು ಎಂದು ಏಣಿ ಹೇಳಿಕೊಳ್ಳುತ್ತದೆ.

**ವಿಶೇಷತೆ:** ಮೇಲಕ್ಕೇರಿದವರ ಶ್ರಮ ಕಷ್ಟ ಮಾತ್ರವಲ್ಲ, ಮೇಲಕ್ಕೇರಿಸಿದವರಲ್ಲೂ ಕಷ್ಟ ನೋವುಗಳಿರುತ್ತದೆ ಎಂಬುದು ಈ ಸಂದರ್ಭದ ವಿಶೇಷತೆ.

**3. ನಾನು ತಿರಸ್ಕರಿಸಿದರೆ ಏನು ಮಾಡುತ್ತಾರೆ ಈ ಶಿಖಂಡಿಗಳು?**

**ಉತ್ತರ:** ಪ್ರಸ್ತುತ ವಾಕ್ಯವನ್ನು 'ಸುಕನ್ಯಾ ಮಾರುತಿ' ಅವರು ಬರೆದಿರುವ 'ಸಮಗ್ರ ಕವನ ಸಂಕಲನ' ಕೃತಿಯಿಂದ ಆಯ್ದು, 'ಏಣಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಏಣಿಯ ಸಹಾಯದಿಂದ ಮೇಲಕ್ಕೇರಿದವರು ಕೆಳಗೆ ಇಳಿಯುವಾಗ ಏಣಿಯನ್ನು ನೆನಪಿಸಿಕೊಳ್ಳುವ ಸಂದರ್ಭದಲ್ಲಿ ಏಣಿಯು ಹಾಕುವ ಪ್ರಶ್ನೆಯು ಮೇಲಿನದ್ದಾಗಿದೆ.

**ವಿವರಣೆ:** ಕಾಲೂರಿದ ನೆಲವನ್ನು ತಿರಸ್ಕರಿಸಿದ ಜನರು ಆಕಾಶದಲ್ಲಿ ಎಷ್ಟೇ ಹೊತ್ತು ಹಾರಾಡಿದರೂ ಅವರು ಏಣಿಯ ಸಹಾಯದಿಂದಲೇ ಮತ್ತೆ ಕೆಳಗೆ ಇಳಿಯಬೇಕು. ಆ ಸಂದರ್ಭದಲ್ಲಿ ಏಣಿಯು ತಿರಸ್ಕರಿಸಿದರೆ ಅವರು ಏನು ಮಾಡುತ್ತಾರೆಂದು ಏಣಿ ಪ್ರಶ್ನಿಸುತ್ತದೆ.

**ವಿಶೇಷತೆ:** ಕಾಲೂರುವ ನೆಲವನ್ನು ಮರೆತು ಮೇಲೇರುವ ಜನ ಮತ್ತೆ ಕೆಳಗಿಳಿಯಲು ಸಹಾಯ ಯಾಚಿಸಿದಾಗ ಹತ್ತಲು ಸಹಾಯ ಮಾಡಿದವರೇ ತಿರುಸ್ಕರಿಸಿದರೆ ಅವರ ಸ್ಥಿತಿ ಏನಾಗುತ್ತದೆ ಎಂಬುದೇ ಇಲ್ಲಿಯ ವಿಶೇಷತೆ.

**4. ನಮ್ರತೆಗೆ ನಾ ಕರಗುತ್ತೇನೆ.**

**ಉತ್ತರ:** ಪ್ರಸ್ತುತ ವಾಕ್ಯವನ್ನು 'ಸುಕನ್ಯಾ ಮಾರುತಿ' ಅವರು ಬರೆದಿರುವ 'ಸಮಗ್ರ ಕವನ ಸಂಕಲನ' ಕೃತಿಯಿಂದ ಆಯ್ದ, 'ಏಣಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಏಣಿಯು ಜನರ ವಿನಯಕ್ಕೆ ಕರಗುತ್ತದೆ ಎಂದು ಕವಿಯು ಹೇಳುವ ಸಂದರ್ಭದಲ್ಲಿ ಮೇಲಿನ ಮಾತು ಹೇಳುತ್ತದೆ.

**ವಿವರಣೆ:** ಏಣಿಯು ಮೇಲಕ್ಕೇರಿದ ಜನರ ಸೊಕ್ಕು ಕರಗಿ ಭೂಮಿ ಶಾಶ್ವತವೆಂಬ ಅರಿವು ಮೂಡಿದಾಗ ಅವರಿಗೆ ಅದು ನಿಲುಕುವುದಿಲ್ಲ, ಯಾವ ಜನಸಾಮಾನ್ಯರಲ್ಲಿ ವಿನಯ ವಿಧೇಯ ಇರುತ್ತದೆಯೋ ಅಂತಹ ಜನಸಾಮಾನ್ಯರ ನಮ್ರತೆಗೆ ಕರಗಿ ಅವರನ್ನು ಕೆಳಗೆ ಬೀಳದಂತೆ ಎತ್ತಿ ಹಿಡಿಯುತ್ತದೆ ಎಂದು ಕವಿಯು ಹೇಳಿದ್ದಾರೆ.

**ವಿಶೇಷತೆ:** ಏಣಿಯು ಅಹಂಕಾರಿಗಳಿಗೆ ಸ್ಪಂದಿಸುವುದಿಲ್ಲ, ವಿನಯ ವಿಧೇಯ ಜನರಿಗೆ ಸ್ಪಂದಿಸುತ್ತದೆ ಎಂಬುದು ಈ ಸಂದರ್ಭದ ವೈಶಿಷ್ಟ್ಯ.

## ಭಾಷಾಭ್ಯಾಸ

### ಅ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ:

**ಅ. ತಿರಸ್ಕಾರ** – ಹಿರಿಯರ ಒಳ್ಳೆಯ ಮಾತುಗಳನ್ನು ನಾವು ತಿರಸ್ಕಾರ ಮಾಡಬಾರದು.

**ಆ. ನಮ್ರತೆ** – ನಾವು ಯಾವುದೇ ಕೆಲಸವನ್ನು ನಮ್ರತೆಯಿಂದ ಮಾಡಬೇಕು.

**ಇ. ಸುರಕ್ಷಿತ** – ಯೋಧರು ನಮ್ಮ ದೇಶವನ್ನು, ದೇಶದ ಜನರನ್ನು ಸುರಕ್ಷಿತವಾಗಿ ಕಾಪಾಡುತ್ತಾರೆ.

**ಈ. ಕಾಳಜಿ** – ಮಕ್ಕಳು ಓದಿನ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು.

**ಪದ್ಯ – 1** **ಏಣಿ**

## ಆ. ಕೆಳಗಿನ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸದ ಹೆಸರು ಬರೆಯಿರಿ:

**ಅ. ಕೈಬೀಸು** – ಕೈಯನ್ನು + ಬೀಸು = ಕ್ರಿಯಾಸಮಾಸ

**ಆ. ಮೇಲಂತಸ್ತು** – ಮೇಲಿನ + ಅಂತಸ್ತು = ತತ್ಪುರುಷ ಸಮಾಸ

**ಇ. ಆನೆಭಾರ** – ಆನೆಯ + ಭಾರ = ತತ್ಪುರುಷ ಸಮಾಸ

## ಇ. ಕೆಳಗೆ ನೀಡಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ:

**ಅ. ತಿರಸ್ಕಾರ** × ಪುರಸ್ಕಾರ

**ಆ. ಶಾಶ್ವತ** × ಕ್ಷಣಿಕ, ತಾತ್ಕಾಲಿಕ

**ಇ. ಇಳಿ** × ಏರು

**ಈ. ಸುರಕ್ಷಿತ** × ಅಸುರಕ್ಷಿತ

**ಉ. ಭಾರ** × ಹಗುರ

**ಊ. ಭಯ** × ನಿರ್ಭಯ

**ಋ. ಕೆಡವು** × ಕಟ್ಟು